


ಮಾರಿಯಮ್ಮ ಟೆಂಪಲ್



ಕಷ್ಟವಾಗತೊಡಗಿತು. ಸಾಗಣೆ ವೆಚ್ಚವೂ ತುಂಬಾ ದುಬಾರಿಯಾಗಿ ಪರಿಣಮಿಸಿತು. ಜಗತ್ತಿನಾದ್ಯಂತ ಮಿಲಿಯಗಟ್ಟಲೆ ಜನರು ಸ್ಪ್ಯಾನಿಷ್ ಫ್ಲೂಗೆ ತುತ್ತಾಗತೊಡಗಿದ್ದರು. ಈ ಜ್ವರ ಕೆಲ್ಲಿಯ ಎಸ್ಟೇಟಿನ ಅನೇಕ ಭಾರತೀಯ, ತಮಿಳು ಕಾರ್ಮಿಕರು ಮತ್ತು ಕುಶಲಕರ್ಮಿಗಳನ್ನು ಬಲಿ ತೆಗೆದುಕೊಂಡಿತು. ಸ್ಥಳೀಯರು ಕೋಟೆಗೆ ಏನೋ ದೋಷ ತಗುಲಿದೆ ಎಂದೇ ನಂಬುತ್ತಾರೆ! ರಕ್ಷಣೆಗಾಗಿ ಮಾರಿಯಮ್ಮ ದೇವತೆಯ ಕೃಪೆಗಾಗಿ ದೇವಸ್ಥಾನ ಕಟ್ಟಿಸಲು ಕೇಳಿಕೊಂಡರು. ಅವರ ನಂಬುಗೆಗೆ ಬಲ ನೀಡುವಂತೆ ದೇವಸ್ಥಾನ ನಿರ್ಮಾಣ ಮುಗಿಯುವ ಹೊತ್ತಿಗೆ ಕಾಯಿಲೆಯೂ ಕೊನೆಯಾಯಿತು.

ಉದಾರವಾಗಿ ದೇವಸ್ಥಾನ ಕಟ್ಟಲು ಹಣ ಸಹಾಯ ಮಾಡಿದ ಕೆಲ್ಲಿಯ ಗುಣಕ್ಕೆ ಮನಸೋತ ಅವರೆಲ್ಲ ದೇವಸ್ಥಾನದ ಮೇಲ್ಭಾಗದಲ್ಲಿ ಹಿಂದೂ ದೇವತೆಗಳ ಮಧ್ಯೆ ಕೆಲ್ಲಿಯ ಪ್ರತಿಮೆಯನ್ನೂ ಸ್ಥಾಪಿಸಿದರು. ಈಗಲೂ ಈ ವಿಚಿತ್ರ ಚಿತ್ರಣ ಕಾಣಬಹುದು. ಕೋಟೆಯಿಂದ ಸುಮಾರು 500 ಮೀಟರ್ ದೂರದಲ್ಲಿ ಶ್ರೀ ಮಹಾಮಾರಿಯಮ್ಮ ಲಡಾಂಗ್ ಕಿಂಬಾಕ್ ದೇವಸ್ಥಾನ ಇದೆ. ಎದುರು ಹರಿಯುವ ತೊರೆಯ ಮೇಲೆ ಪುಟ್ಟ ಸೇತುವೆ ದಾಟಿಯೇ ಕೋಟೆ ಪ್ರವೇಶಿಸಬೇಕು. 14 ಕೋಣೆಗಳ ಮನೆಯ ಯೋಜನೆಯಲ್ಲಿ ಲಿಫ್ಟ್ ಕೂಡ ಇತ್ತು. ಹಾಗೇನಾದರೂ ಆಗಿದ್ದರೆ ಅದು ಮಲೇಷ್ಯಾದಲ್ಲೇ ಮೊದಲ ಲಿಫ್ಟ್ ಆಗಿರುತ್ತಿತ್ತು. ಒಳಾಂಗಣ ಟೆನಿಸ್ ಕೋರ್ಟ್, ಟೆರೇಸ್ ಮೇಲಿನ ಸಭಾಂಗಣ ಅತಿಥಿಗಳ ಮನರಂಜನೆಗೆಂದೇ ಮೀಸಲಿತ್ತು.

1926ರಲ್ಲಿ ಇಂಗ್ಲೆಂಡ್‌ಗೆ ಹೋಗಿ ಆರಂತಸ್ತಿನ ಕೋಟೆಗೆ ಲಿಫ್ಟ್ ತರುವ ಯೋಚನೆ ಮಾಡಿದಾತ ಕೆಲ್ಲಿ. ಆದರೆ ಪೋರ್ಚುಗಲ್‌ನ ಲಿಸ್ಬನ್‌ನಲ್ಲಿ ಹೋಟೆಲೊಂದರಲ್ಲಿ ಉಳಿದಾಗ ಥಂಡಿ ಹತ್ತಿ ನ್ಯುಮೋನಿಯಾದಿಂದ ಬಳಲಿ ಅಸುನೀಗಿದ. ಅವನನ್ನು ಅಲ್ಲೇ ಬ್ರಿಟಿಷ್ ಸ್ಮಶಾನದಲ್ಲಿ ಮಣ್ಣು ಮಾಡಿದರು. ಕೆಲ್ಲಿಯ ಪತ್ನಿ ಏನ್ಸ್ ಮತ್ತು ಆಕೆಯ ಮಕ್ಕಳು ಮಲಯಕ್ಕೆ ವಾಪಸಾಗಲೇ ಇಲ್ಲ. ಏನ್ಸ್‌ಗೆ ಕೆಲ್ಲಾಸ್ ಎಸ್ಟೇಟ್‌ನಲ್ಲಿ ಆಸಕ್ತಿ ಉಳಿದಿರಲಿಲ್ಲ. ಕೊನೆಗೆ ಇತ್ತ 'ಕೆಲ್ಲಾಸ್ ಹೌಸ್' (ನಂತರ ಕೆಲ್ಲೀಸ್ ಫಾಲಿ ಅಥವಾ ಕೆಲ್ಲೀಸ್ ಕ್ಯಾಸಲ್ ಎಂದು ಕರೆಯಿಸಿಕೊಂಡ) ಹ್ಯಾರಿಸನ್ಸ್ ಅಂಡ್ ಕ್ರಾಸ್‌ಫೀಲ್ಡ್ ಎಂಬ ಬ್ರಿಟಿಷ್ ಕಂಪೆನಿಗೆ ಮಾರಾಟವಾಯಿತು. ಟೀ, ಕಾಫಿ ವ್ಯವಹಾರದಲ್ಲಿ ತೊಡಗಿದ್ದ ಈ ಕಂಪೆನಿಗೂ ಕೋಟೆ ನಿರ್ಮಾಣ ಮಾಡಿ ಮುಗಿಸುವುದು ಸುಮ್ಮನೇ ಹಣ ವ್ಯರ್ಥ ಎನಿಸಿತು. ಕೋಟೆ ಹಾಗೇ ಉಳಿಯಿತು. ಕೆಲ್ಲಿಯ ಮಗ ಪೈಲಟ್ ಆಗಿದ್ದವನು, ಎರಡನೇ ಮಹಾಯುದ್ಧದಲ್ಲಿ ಸಾವನ್ನಪ್ಪಿದ.

ಮಗಳು ಹೆಲೆನ್‌ಗಾಗಿ ಯೋಜಿಸಿದ ಕೋಣೆಯ ಛಾವಣಿಗೆ ನೀಲಿ ಪ್ಲಾಸ್ಟರ್. ಕೋಟೆಗೆ ಭೇಟಿ ನೀಡುವವರು ಆಕೆಯ ಆತ್ಮವನ್ನು ಈ ಕೋಣೆ ಯಲ್ಲಿ ಕಂಡದ್ದಿದೆಯಂತೆ. ತನ್ನ ಕೋಣೆಯಿಂದ ಹೊರಬರುವ ಆಕೆ ಕೆಲಕ್ಷಣ ಗಳಲ್ಲೇ ಮಾಯವಾಗುತ್ತಾಳಂತೆ! ಗುಂಗುರು ಕೂದಲಿನ ಆರು ವರ್ಷದ ಬಾಲಕಿ ಬಿಳಿಯ ದಿರಿಸು ಧರಿಸಿರುತ್ತಾಳೆ. ಆದರೆ ಚರಿತೆ ಹೇಳುವುದು ಆಕೆ ಮಲಯ ಬಿಟ್ಟು ಹೋದದ್ದು 1926ರಲ್ಲಿ, ಅಂದರೆ 22 ವರ್ಷ ಯುವತಿ ಯಾದಾಗ. ನಂತರ ಇಲ್ಲಿಗೆ ಮರಳಿದ್ದೇ ಇಲ್ಲ!

ಪೋರ್ಚುಗಲ್‌ನಲ್ಲಿ ಸತ್ತಿದ್ದರೂ ಈಗಲೂ ಅವನ ಆತ್ಮ ಈ ಕೋಟೆ ಆವರಣದ ವೆರಾಂಡಗಳಲ್ಲಿ ಸುಳಿದಾಡುತ್ತ ಕೋಟೆಯ ರಕ್ಷಣೆ ಮಾಡುತ್ತಿದೆ ಎಂಬ ಬಲವಾದ ನಂಬುಗೆ ಇದೆ. ಕೆಲ್ಲಿಯ ಪತ್ನಿ ಮಲಗುವ ಕೋಣೆಯಲ್ಲಿ ದೆವ್ವದಂಥ ಆಕೃತಿ ಕಂಡವರುಂಟಂತೆ. ಆದರೆ ಮಲೇಷ್ಯಾದ ಐದು ಭಯಗ್ರಸ್ತ ಸ್ಥಳಗಳಲ್ಲಿ ಇದೂ ಒಂದು ಎಂದು ಅಂತರರಾಷ್ಟ್ರೀಯ ಅಸಹಜ ಸಂಗತಿಗಳ ತನಿಖಾದಾರರು ವರ್ಗೀಕರಣ ಮಾಡಿದ್ದಾರೆ.

## ಎಕೊ ರೆಸಾರ್ಟ್

ಅಲ್ಲಿಂದ ಹೊರಟು ತಲುಪಿದ್ದು ಪೆರಾಕ್‌ನ ರಾಜಧಾನಿ ಇಪೊದಲ್ಲಿರುವ 'ದಿ ಹ್ಯಾವೆನ್' ಹೋಟೆಲ್ ಐಷಾರಾಮಿ ರೆಸಾರ್ಟ್‌ಗೆ. 280 ವರ್ಷಗಳಷ್ಟು ಹಳೆಯ ಪರಿಸರದಲ್ಲಿರುವ ಇದು ಎಕೊ ರೆಸಾರ್ಟ್. ನಗರದಿಂದ ಐದೇ